**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept – Oct 2022**


# ಭೋಗನಂದೀಶ್ವರ ದೇವಾಲಯ- ಶಿವನೊಬ್ಬ ನಾಮ ಹಲವು

**- ರೋಹಿಣಿ ಮಂಜುನಾಥ್, ಬೆಂಗಳೂರು**

ಶಿವನ ಆರಾಧನೆಯನ್ನು ಸಹಸ್ರಾರು ವರುಷಗಳ ಹಿಂದಿನ ಸಿಂಧು ಕಣಿವೆ ನಾಗರಿಕತೆಯ ಸಮಯದಿಂದಲೂ ನೋಡಬಹುದು .ಹರಪ್ಪ ಮೊಹೆಂಜದಾರೋ ನಗರಗಳಲ್ಲಿ ಸಿಕ್ಕಿರುವ ಪಶುಪತಿನಾಥನ ಸ್ವರೂಪದ ಅವಶೇಷಗಳು ಇದಕ್ಕೆ ಪುರಾವೆಯಾಗಿದೆ .ಯೋಗಿಗಳ ಆದಿಯೋಗಿಯಾಗಿ, ಸಂತರ ಮಹದೇವನಾಗಿ, ಭಕ್ತರ ಅಭೀಷ್ಟ ಸಿದ್ಧಿದಾತ ಶಂಕರನಾಗಿದ್ದಾನೆ. ಶತಮಾನಗಳಿಂದ ನಡೆದುಬಂದ ಹತ್ತು ಹಲವಾರು ರಾಜವಂಶದ ಕುಲದೈವನಾಗಿದ್ದಾನೆ. ವಿಜಯನಗರದ ರಾಜರಿಗೆ ವಿರೂಪಾಕ್ಷನಾದರೆ, ಕದಂಬರಿಗೆ ಮಧುಕೇಶ್ವರ, ಹಾಗು ಚಾಲುಕ್ಯರಿಗೆ ಮಹಾಕೂಟೇಶ್ವರನಾಥ.



ವೇದವ್ಯಾಸರ ಶಿವಮಹಾಪುರಾಣದಲ್ಲಿ, ಸೇಕ್ಕಿಳಾರರ ಪೆರಿಯ ಪೂರಣಂ, ಪರಂಜ್ಯೋತಿ ಮುನಿಗಳ ತಿರುವಿಳಯಾಡಲ್ ಪುರಾಣಮ್ ಗಳಲ್ಲಿ ಹೇಗೆ ತನ್ನ ಭಕ್ತರನ್ನು ಆಶೀರ್ವದಿಸಲು ಶಿವನು ವಿವಿಧ ರೂಪಗಳನ್ನು ಧರಿಸಿದನೆಂದು ತಿಳಿಸುತ್ತಾರೆ. ನನ್ನ ಈ ಲೇಖನದ ಮೂಲಕ ಭೋಗನಂದೀಶ್ವರನ ದೇವಸ್ಥಾನದಲ್ಲಿ ಶಂಕರನ ನಾನಾ ರೂಪದ ಹಿಂದಿರುವ ವಿಶೇಷತೆಯನ್ನು ತಿಳಿಯುವ ಪ್ರಯತ್ನ ಮಾಡುತಿದ್ದೇನೆ .ನನ್ನ ಈ ಪ್ರಯತ್ನಕ್ಕೆ ಅವಕಾಶ ಕಲ್ಪಿಸಿದ ನೂಪುರ ಭ್ರಮರಿಗೆ ನಾನು ಚಿರಋಣಿ.



ಬೆಂಗಳೂರಿಗೆ ಸುಮಾರು 60 ಕಿ. ಮೀ. ಸಮೀಪದಲ್ಲಿರುವ, ಸುಂದರವಾದ ಬೆಟ್ಟಗಳಿಂದ ಆವೃತವಾಗಿರುವ ಚಿಕ್ಕಬಳ್ಳಾಪುರದ ನಂದಿಗ್ರಾಮದ ಭೋಗನಂದೀಶ್ವರ ದೇವಸ್ಥಾನ ಕಲಾರಸಿಕರನ್ನು ಕೈಬೀಸಿ ಕರೆದಂತಿದೆ. ದ್ರಾವಿಡ ಶೈಲಿಯ ಒಂಬತ್ತನೆ ಶತಮಾನದ ಈ ದೇವಾಲಯ, ಅಂದಿನ ಕಾಲದ ಶ್ರೀಮಂತ ಸಂಸ್ಕೃತಿಯ ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ ಶಿಲ್ಪಿಗಳ ಕಲಾಕೌಶಲ್ಯವನ್ನು ಎತ್ತಿಹಿಡಿದಿದೆ.

ಈ ಅವಳಿ ದೇವಸ್ಥಾನಗಳಲ್ಲಿ ಶಿವನು ಭೋಗನಂದೀಶ್ವರ ಹಾಗು ಅರುಣಾಚಲೇಶ್ವರನೆಂಬ ಹೆಸರಿನಲ್ಲಿ ನೆಲೆಸಿದ್ದಾನೆ. ಐದು ರಾಜವಂಶಸ್ಥರ ಅಂದರೆ ನೊಳಂಬ, ಗಂಗಾ, ಚೋಳ, ಹೊಯ್ಸಳ ಹಾಗು ವಿಜಯನಗರದ ವಾಸ್ತುಶಿಲ್ಪದ ಸಂಗಮವನ್ನು ಇಲ್ಲಿ ಕಾಣಬಹುದು ನೊಳಂಬರ ಶೈಲಿಯ .ಜಾಲವಾತಾಯನಗಳು, ಚೋಳರ ಸಂಕೇತವಾಗಿ ಅಲ್ಲಿನ ಶಾಸನ ಹಾಗು ರಾಜ ರಾಜ ಚೋಳನ ಶಿಲ್ಪ, ಹೊಯ್ಸಳ ಶೈಲಿಯ ಅತಿಸೂಕ್ಷ್ಮ ಕೆತ್ತನೆ ಇರುವ ಉಮಾ ಮಹೇಶ್ವರ ದೇವಸ್ಥಾನದ ನವರಂಗ ಹಾಗು ವಿಜಯನಗರ ಶೈಲಿಯಲ್ಲಿನ ಮುಖಮಂಟಪ.

ಈ ದೇವಸ್ಥಾನದಲ್ಲಿ ಶಿವನ ಶಿಲ್ಪಗಳನ್ನು, ವಿಗ್ರಹ ರೂಪದಲ್ಲಿ, ಗೋಪುರದಲ್ಲಿ, ಮೇಲ್ಚಾವಣಿಯಲ್ಲಿ, ಭಿತ್ತಿಗಳಲ್ಲಿ, ಕಂಬಗಳಲ್ಲಿ ಹಾಗು ಜಾಲವಾತಾಯನಗಳಲ್ಲಿ ಕಾಣಬಹುದು. ಮೊದಲಿಗೆ ಶಾಲಗ್ರಾಮ ಶಿಲೆಯ ಅರುಣಾಚಲೇಶ್ವರನ ಲಿಂಗ, ನಂತರ ಉಮೆಯು ಮಹೇಶ್ವರನ ವಾಮಭಾಗದಲ್ಲಿ ಕುಳಿತಿರುವ ಅಪರೂಪದ ಏಕಶಿಲಾ ವಿಗ್ರಹ, ಹಾಗು ಕೊನೆಯಲ್ಲಿ ಪಚ್ಚೆ ಕಲ್ಲಿನ ಭೋಗನಂದೀಶ್ವರನ ಲಿಂಗ ಇರುವುದನ್ನು ಕಾಣಬಹುದು.

Copyright Protected

**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept – Oct 2022**







ಅರುಣಾಚಲೇಶ್ವರನು ಶಿವನ ಬಾಲ್ಯವನ್ನು, ಭೋಗನಂದೀಶ್ವರ ಯೌವನವನ್ನು, ಮತ್ತು ನಂದೀ ಬೆಟ್ಟದ ತುದಿಯಲ್ಲಿಯ ಯೋಗ ನಂದೀಶ್ವರ ಅಂತಿಮ "ತ್ಯಾಗದ" ಹಂತವನ್ನು ಪ್ರತಿನಿಧಿಸುತ್ತದೆ,



ಉಮಾಮಹೇಶ್ವರ ಸನ್ನಿಧಿಯ ಮುಂದಿರುವ ಮುಖಮಂಟಪದ ಮೇಲ್ಭಾಗದಲ್ಲಿ ಇರುವ ಕೆತ್ತನೆ ಚೋಳರ ವಾಸ್ತುಶಿಲ್ಪದಲ್ಲಿ ವಿಶೇಷವಾಗಿ ಕಾಣಬಹುದು .ಶಿವನು ನರ್ತಿಸುತ್ತಿರುವಾಗ ವಿಷ್ಣುವು ಮೃದಂಗ, ಸರಸ್ವತಿ ವೀಣೆ, ಬ್ರಹ್ಮನು ತಾಳವನ್ನು ನುಡಿಸುತ್ತಿರುವುದನ್ನು ನೋಡಲು ಕಣ್ಮನಗಳು ಆನಂದಭರಿತವಾಗುತ್ತವೆ.

ಈ ದೇವಾಲಯದಲ್ಲಿ ಧ್ಯಾನದ ಭಂಗಿಯಲ್ಲಿ ಯೋಗಮೂರ್ತಿಯಾಗಿ, ನಿಂತಿರುವ ಭಂಗಿಯಲ್ಲಿ ಭೋಗಮೂರ್ತಿಯಾಗಿ, ಆಯುಧಹಿಡಿದಿರುವ ವೀರ ಮೂರ್ತಿಯಾಗಿ ಹಾಗು ದುಷ್ಟರಿಂದ ಕಾಪಾಡುವ ಉಗ್ರಮೂರ್ತಿಯ ರೂಪದಲ್ಲಿ, ಶಿಲ್ಪಗಳನ್ನು ಕಾಣಬಹುದು.









ಸುಖಾಸನದಲ್ಲಿ, ಪದ್ಮಾಸನದಲ್ಲಿ ಕುಳಿತಿರುವ ಶಿವನು ತನ್ನ ಕೈಯಲ್ಲಿ ಆಯುಧವನ್ನು ಮತ್ತು ಜಿಂಕೆಯನ್ನು ಹಿಡಿದಿದ್ದಾನೆ .ಶಿವನ ಯೋಗ ದಕ್ಷಿಣಾಮೂರ್ತಿಯ ಸ್ವರೂಪವನ್ನು ಕೂಡ ಇಲ್ಲಿ ಕಾಣಬಹುದು.

**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept – Oct 2022**







ಭೈರವನ ವಿವಿಧ ರೂಪಗಳಾದ ವಟುಕ.ಭೈರವ ಮತ್ತು ವೀರಭದ್ರರನ್ನು ಶಿಲ್ಪಗಳಲ್ಲಿ ಕಾಣಬಹುದು- ಭೈರವನು ಶಿವನ ಉಗ್ರ ಅವತಾರ.

ಭೈರವನು ಡಮರು, ತ್ರಿಶೂಲ, ರುಂಡಮಾಲೆ, ಹಗ್ಗ ಮತ್ತು ಗದೆಯನ್ನು ಕೈಯಲ್ಲಿ ಹಿಡಿದಿರುವವನು, ಕಪಾಲವನ್ನು ಹೊಂದಿರುವವನು (ಅಹಂಕಾರದ ಸಂಕೇತ - ಬ್ರಹ್ಮನ ಐದನೇ ತಲೆ)ನಗ್ನನಾಗಿರುವವನು, ಶ್ವಾನವನ್ನು ವಾಹನವನ್ನಾಗಿರಿಸಿಕೊಂಡವನು ಎಂದು ತೋರಿಸಲಾಗಿದೆ .





ಕಾಲ ಭೈರವ ಕರ್ನಾಟಕ, ಮಹಾರಾಷ್ಟ್ರ, ಮತ್ತು ತಮಿಳುನಾಡಿನ ಪ್ರದೇಶದಲ್ಲಿ ಗ್ರಾಮ ದೇವತೆಯಾಗಿ ಪೂಜಿಸಲ್ಪಡುತ್ತಾನೆ .ಕರ್ನಾಟಕದಲ್ಲಿ, ಗೌಡರು ಎಂದು ಕರೆಯಲ್ಪಡುವ ಒಕ್ಕಲಿಗ ಸಮುದಾಯದವರ ಕುಲದೇವನು ಈ ಭೈರವ ಅದರಲ್ಲೂ ವಿಶೇಷವಾಗಿ ಗಂಗಡಿಕಾರರ .ಆರಾಧ್ಯದೈವ ಎಂದು ಪರಿಗಣಿಸಲಾಗುತ್ತದೆ.

ದಕ್ಷ ಪ್ರಜಾಪತಿಯ ಪುತ್ರಿ ಮತ್ತು ಶಿವನ ಪತ್ನಿ ಪಾರ್ವತಿಯು ಯಜ್ಞದ ಅಗ್ನಿಕುಂಡದಲ್ಲಿ ಆಹುತಿಯಾದಾಗ, ಶಿವನ ಕ್ರೋಧಾಗ್ನಿಯಿಂದ ಸೃಷ್ಟಿಸಲ್ಪಟ್ಟವನೇ ವೀರಭದ್ರ. ಈತ ದಕ್ಷನ ಶಿರಚ್ಛೇದನ ಮಾಡಿದ ನಂತರ ಶಿವನ ಅನುಕಂಪದಿಂದ ದಕ್ಷನಿಗೆ ಆಡಿನ ತಲೆಯನ್ನು ಜೋಡಿಸಲಾಗುತ್ತದೆ. ಭೈರವನ ಬಲಭಾಗದಲ್ಲಿ ದಕ್ಷನನ್ನು ಇಲ್ಲಿ ಕಾಣಬಹುದು.





ನಟರಾಜನು ಇಲ್ಲಿ ಅಪಸ್ಮಾರನನ್ನು ತನ್ನ ಬಲಗಾಲಿನ ಬದಲು ಎಡಗಾಲಿನಲ್ಲಿ ಮೆಟ್ಟಿನಿಂತಿದ್ದಾನೆಇದೊಂದು . ಅಪರೂಪದ ಶಿಲ್ಪವಾಗಿದೆ. ನಟೇಶನನ್ನು ಇಲ್ಲಿನ ಜಾಲವಾತಾಯನದಲ್ಲೂ ಕಾಣಬಹುದು ಇಲ್ಲಿರುವ .ಹತ್ತು ಜಾಲವಾತಾಯನಗಳಲ್ಲಿ ಇದು ಮೊದಲನೆಯದು .ಇದು ನೊಳಂಬವಾಡಿ ಶೈಲಿಯ ವಾಸ್ತುಶಿಲ್ಪ ಚಿಕ್ಕ ಚಿಕ್ಕ . ರಂಧ್ರವಿರುವ, ಕಲ್ಲಿನ ಕಿಟಕಿ / ಜಾಲವಾತಾಯನಗಳನ್ನು ನವರಂಗ ಮತ್ತು ಅಂತರಾಳಕ್ಕೆ ಬೆಳಕನ್ನು ಒದಗಿಸಲು ಬಳಸಿರುವುದು ಅತ್ಯಂತ ಗಮನಾರ್ಹ ಲಕ್ಷಣ .ಶಿವನು ಇಲ್ಲಿ ಡಮರು, ಅಗ್ನಿ, ತ್ರಿಶೂಲ, ಕರತಾಳ - ಸಂಗೀತ ವಾದ್ಯ, ಗಂಟೆ, ಕಪಾಲವನು ಹಿಡಿದು ನಟೇಶನ ಭಂಗಿಯಲ್ಲಿ ನಿಂತಿದ್ದಾನೆ.



ಲಿಂಗೋಧ್ಭವ ಮೂರ್ತಿ ಲಿಂಗೋ :ಧ್ಭವ ಶಿವನು ಲಿಂಗದ ರೂಪದಲ್ಲಿ ಹೊರಹೊಮ್ಮುತ್ತಿರುವ ಒಂದು ರೂಪವಾಗಿದೆ . ಆಗಮಗಳ ನಿಯಮಗಳನ್ನು ಅನುಸರಿಸಿ ನಿರ್ಮಿಸಲಾದ ದೇವಾಲಯಗಳಲ್ಲಿ ಲಿಂಗೋಧ್ಭವ ಪ್ರತಿಮೆಯನ್ನು ನೋಡುವುದು ಸಾಮಾನ್ಯ ಸಂಗತಿಯಾಗಿದೆಈ ರೂಪವನ್ನು . ಶಿವನ ದೇವಾಲಯಗಳಲ್ಲಿ ಬಳಸುವುದು ಚೋಳರ ಕಾಲದಲ್ಲಿ ಹೆಚ್ಚು ಜನಪ್ರಿಯವಾಯಿತು ಮತ್ತು ನಂತರದ ವಿಜಯನಗರ ರಾಜವಂಶಸ್ಥರಿಂದ ಈ ಪರಂಪರೆಯು ಮುಂದುವರೆಯಿತು.



ಭಿಕ್ಷಾಟನಾ ಮೂರ್ತಿ ಎಂದು ಕರೆಯಲ್ಪಡುವ ಶಿವನ ಮತ್ತೊಂದು ರೂಪವನ್ನು ಇಲ್ಲಿ ನೋಡಬಹುದು. ಬ್ರಹ್ಮನ ಐದನೇ ತಲೆಯನ್ನು ಕತ್ತರಿಸಿದ ಪ್ರಾಯಶ್ಚಿತ್ತಕ್ಕಾಗಿ ಶಿವನು ಈ ರೂಪವನ್ನು ತೆಗೆದುಕೊಳ್ಳುತ್ತಾನೆ. ಈ ಸ್ವರೂಪದಲ್ಲಿ ಶಿವನು ಕಂಕಾಲಮೂರ್ತಿ ಎಂದು ಕೂಡ ಕರೆಯಲ್ಪಡುತ್ತಾನೆ. ಕಂಕಾಲಮೂರ್ತಿ ಭೈರವನ ಮೂರು ಅತ್ಯಂತ ಮುಖ್ಯವಾದ ಸ್ವರೂಪಗಳಲ್ಲಿ ಒಂದಾಗಿದೆ; ಮತ್ತೆರಡು ಬ್ರಹ್ಮಶಿರಶ್ಛೇದಕಮೂರ್ತಿ ಮತ್ತು ಭಿಕ್ಷಾಟನಾಮೂರ್ತಿಯದ್ದಾಗಿದೆ. ತನ್ನ ಎಡಗಾಲನ್ನು ನೆಲದ ಮೇಲೆ ದೃಢವಾಗಿ ಮತ್ತು ಬಲಗಾಲನ್ನು ಸ್ವಲ್ಪ ಬಾಗಿಸಿರುವುದಾಗಿ ಶಿಲ್ಪವನ್ನು ಕೆತ್ತಿರುವ ಶಿಲ್ಪಿಯು ಶಿವನು ಚಲನೆಯಲ್ಲಿರುವುದನ್ನು ಸೂಚಿಸುತ್ತಾನೆ. ಶಿವನು ಪಾದುಕಾ (ಮರದ ಚಪ್ಪಲಿ)ಗಳನ್ನು ಧರಿಸಿರುವುದು ಇಲ್ಲಿ ಗಮನಾರ್ಹ. ಕಂಕಾಲ ಮೂರ್ತಿಯ ಬಲಕ್ಕೆ ಇರಿಸಲಾಗಿರುವ ಭೂತಗಣ ಶಿವನ ಭಿಕ್ಷೆಯನ್ನು ಸಂಗ್ರಹಿಸಲು ದೊಡ್ಡ ಪಾತ್ರೆಯನ್ನು ಹಿಡಿದಿದ್ದಾನೆ.

Copyright Protected



ಶಿವೆಯ ಶಕ್ತಿಯಿಲ್ಲದೆ ಶಿವನು ಅಪೂರ್ಣ. ವೃಷಭರೂಢರಾಗಿರುವ ಉಮಾಮಹೇಶ್ವರರ ಈ ಶಿಲ್ಪವು ಅತಿಸುಂದರವಾಗಿದೆ.



ಬೇಡರ ಕಣ್ಣಪ್ಪನ ಕಥೆಯನ್ನು ಇಲ್ಲಿ ಕಾಣಬಹುದು ಕಣ್ಣಪ್ಪ .ನಾಯಾನ್ಮಾರ್ ಎನ್ನುವರು ತಮಿಳು ಸಂತರಲ್ಲಿ ಒಬ್ಬರು ಇವರನ್ನು .ತಮಿಳುನಾಡಿನಲ್ಲಿ ಭಕ್ತ ಕಣ್ಣಪ್ಪನ್ ಮತ್ತು ಧೀರನ್ ಎಂದೂ ಕರೆಯುತ್ತಾರೆ . ಕಲಿಯುಗದಲ್ಲಿ ಅರ್ಜುನನ ಪುನರ್ಜನ್ಮವನ್ನು ಕಣ್ಣಪ್ಪ ನಾಯನಾರ್ ಎಂದು ಹೇಳಲಾಗುತ್ತದೆ. ಅವರು ಶ್ರೀಕಾಳಹಸ್ತೀಶ್ವರ ದೇವಸ್ಥಾನದ ಚೋಳಮಂಡಲದ ತಿರುಕಾಲತ್ತಿಯ ವಾಯುಲಿಂಗದ ಕಟ್ಟಾ ಭಕ್ತರಾಗಿದ್ದ ತಿಣ್ಣನ್ ಆಗಿ ಜನಿಸಿದರು ೬೩ ಅಲ್ಲದೆ .ಇವರ ಅಪಾರ ಭಕ್ತಿಗೆ ಮೆಚ್ಚಿದ ಶಿವನು ಇವರಿಗೆ ಮೋಕ್ಷ ಕರುಣಿಸಿದನು . ನಾಯಾನ್ಮಾರ್ ರರಲ್ಲಿ ೧೦ ನೇ ನಾಯನ್ಮಾರ್ ರ ಸ್ಥಾನ ಕರುಣಿಸಿದರು. ತಮಿಳಿನ ಪೆರಿಯಪುರಾಣ, ಕನ್ನಡದಲ್ಲಿ ಹರಿಹರನ ರಗಳೆ, ಷಡಾಕ್ಷರಿಯ ವೃಷಭೇಂದ್ರ ವಿಜಯದಲ್ಲಿ ಇವರ ಕಥೆ ಬರುತ್ತದೆ .



ಪ್ರಾಕಾರದಲ್ಲಿ ಕಾಣಬರುವ ಬಿತ್ತಿಯಲ್ಲಿ ಶಿವ ಪಾರ್ವತಿಯರ ಕಲ್ಯಾಣ ಹಾಗು ತ್ರಿಮೂರ್ತಿಗಳು ವಾಹನಾರೂಢರಾಗಿ ಉತ್ಸವದಲ್ಲಿ ತೆರಳುತ್ತಿರುವುದನ್ನು ನೋಡುವುದೇ ಒಂದು ಭಾಗ್ಯ.

Copyrighted

## ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept – Oct 2022

ಈ ಗೋಪುರಗಳಲ್ಲಿ ಉಮಾಮಹೇಶ್ವರ, ದಕ್ಷಿಣಾಮೂರ್ತಿ ಹಾಗು ನಟೇಶನನ್ನು ಕಾಣಬಹುದು.

ಹೀಗೆ ಇನ್ನು ಹತ್ತು ಹಲವಾರು ಶಿವನ ರೂಪವನ್ನು ಕೆತ್ತನೆಗಳಲ್ಲಿ ಕಾಣಬಹುದು. ಹುಡುಕುತ್ತಾ ಹೋದರೆ ಅದಕ್ಕೆ ಅಂತ್ಯವೇ ಇಲ್ಲದಂತಾಗುತ್ತದೆ .ಎಲ್ಲವೂ ಶಿವಮಯವಲ್ಲವೇ ?

ತಲೆಮಾರುಗಳಿಂದ ನಮಗೆ ಬಳುವಳಿಯಾಗಿ ಬಂದಿರುವ ಈ ದೇವಾಲಯದ ಶಿಲ್ಪಕಲೆಯ ಇತಿಹಾಸ ಮತ್ತು ಪರಂಪರೆಯನ್ನು ಅರ್ಥಮಾಡಿಕೊಳ್ಳಲು ನೂಪುರ ಭ್ರಮರಿ ಸಂಸ್ಥೆಯು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಶಿಲ್ಪಗಳ ಸೌಂದರ್ಯವನ್ನು ಲೇಖಕರ ಪದಗುಚ್ಛಗಳಿಗೆ ಸೀಮಿತಗೊಳಿಸದೆ ಈ ದೇವಾಲಯವನ್ನು ಒಮ್ಮೆಯಾದರೂ ಪ್ರತ್ಯಕ್ಷವಾಗಿ ಕಂಡು ನಮ್ಮ ಸಂಸ್ಕೃತಿಯನ್ನು ಬೆಳಸುವಲ್ಲಿ ಕೈಜೋಡಿಸೋಣ.

**References :**

7 secrets of Shiva by Devdutt Pattanaik, 2011, Westland Ltd., Publishers

Hemavati by Douglas Barrett , 1958, Bhulabhai Institute, Bombay

Manifestations of Shiva, Stella Kramrisch, 1981, Philadelphia Museum of Art

www.academia.edu/461983/The_Nolamba_style_and_Vijayanagara_archaizing_The_Bhoganandisvara_compound_at_Nandi_Karnataka  Andrew Cohen

sreenivasaraos.com, Devalaya Vastu, Yearly archieve 2012

www.academia.edu/11003817/Shaiva_Iconography_in_Chola_Temples

Wikipedia - Kankalamurthy

PC : Divya Prasad

Copyright Protected

**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept – Oct 2022**

**<u>ಲೇಖಿಕೆಯ ಪರಿಚಯ</u>**

## ಶ್ರೀಮತಿ ರೋಹಿಣಿ ಮಂಜುನಾಥ್

ಭರತನಾಟ್ಯದಲ್ಲಿ ಅಪಾರ ಆಸಕ್ತಿ ಹೊಂದಿರುವ ಶ್ರೀಮತಿ ರೋಹಿಣಿ ಮಂಜುನಾಥ್ ಚಿಕ್ಕಂದಿನಿಂದಲೇ ಗುರು ಡಾ ಹೇಮಾ ಗೋವಿಂದರಾಜನ್ ಬಳಿ ನೃತ್ಯಾಭ್ಯಾಸವನ್ನು ಪ್ರಾರಂಭಿಸಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಭರತನಾಟ್ಯ ಜೂನಿಯರ್ ಮತ್ತು ಸೀನಿಯರ್ ನೃತ್ಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ತಮ್ಮ 15 ನೇ ವಯಸ್ಸಿನಲ್ಲಿಯೇ



ರಂಗಪ್ರವೇಶವನ್ನು ಪೂರೈಸಿದ್ದಾರೆನಂತರ ಕರ್ನಾಟಕ . ಕಲಾಶ್ರೀ, ಶಾಂತಲಾ ಪ್ರಶಸ್ತಿ ಪುರಸ್ಕೃತ ಗುರು ಬಿ ಭಾನುಮತಿ ಅವರ ಬಳಿ ಭರತನಾಟ್ಯದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಪ್ರಸ್ತುತ ಗುರು ಶ್ರೀಮತಿ ಶೀಲಾ ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಅಭಿನಯ ಮತ್ತು ಶಾಸ್ತ್ರದ ಅಂಶಗಳಲ್ಲಿ ತರಬೇತಿಯನ್ನು ಪಡೆಯುತ್ತಾ ತಮ್ಮ ನೃತ್ಯ ಪಯಣವನ್ನು ಮುಂದುವರೆಸಿದ್ದಾರೆಪದವಿಯ □ಕಾ.ಬಿ . ನಂತರ ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಭರತನಾಟ್ಯದಲ್ಲಿ ಮಾಸ್ಟರ್ ಆಫ್ ಫೈನ್ ಆರ್ಟ್ಸ್ ಪದವಿಯನ್ನು ಪಡೆದಿದ್ದರೆ.

ಬೆಂಗಳೂರಿನಲ್ಲಿ ತಮ್ಮದೇ ನೃತ್ಯ ಶಾಲೆಯಲ್ಲಿ ಹಲವಾರು ಪ್ರತಿಭಾವಂತ ಯುವ ಕಲಾವಿದರಿಗೆ ಭರತನಾಟ್ಯ ತರಬೇತಿಯನ್ನು ಸಹಾ ನೀಡುತ್ತಿದ್ದಾರೆಇವರು ಗುರು . ವಿದುಷಿ ಎಚ್ ಗೀತಾರವ ಹಿರಿಯ ವಿದ್ಯಾರ್ಥಿನಿಯಾಗಿ ಶಾಸ್ತ್ರೀಯ ಸಂಗೀತವನ್ನು .ಅಭ್ಯಾಸಮಾಡುತಿದ್ದರೆ ವಿದ್ವಾನ್ ಏನ್ ನಾರಾಯಣಸ್ವಾಮಿ ಅವರ ಬಳಿ ನಟ್ಟುವಾಂಗಮ್ ಅಭ್ಯಾಸ ಮಾಡುತಿದ್ದರೆ.

ಪ್ರಸ್ತುತ ಇವರು ನೂಪುರಭ್ರಮರಿ ಸಂಸ್ಥೆಯ 'ನೃತ್ಯಶಿಲ್ಪಯಾತ್ರೆ' ಅಧ್ಯಯನ ತರಬೇತಿಯನ್ನು ( ಇಂಟರ್ನ್ ಶಿಪ್ ) ಪಡೆಯುತ್ತಿದ್ದಾರೆ.

Copyright Protected